ROAD ACCIDENTS IN THE STATE

427 SRI K. M. NAGANNA (Chickpet).—

Will the Chief Minister be pleased to state:—

(*a*) whether it has come to the notice of Government that at least two road accidents on an average are occurring every day in the State ;

(*b*) if so, the preventive steps thay have taken in the matter ?

SRI D. DEVARAJ URS (Chief Minister).—

(*a*) Yes.

(*b*) (a) Speed traps are held to check rash and negligent driving.

(*b*) Erring drivers are punished by suspending their driving licences for grave defaults.

(*c*) Standard pattern warning sign boards and boards indicating speed limits have been erected through out the State wherever necessary. Traffic Weeks are conducted to educate the public and drivers in proper use of roads. Lectures on road safety are delivered to school going children.

(*d*) Road Safety patrols are formed. Wherever necessary roads are widened and curves of roads are straightened.

ಶ್ರೀ ಕೆ. ಎಂ. ನಾಗಣ್ಣ.—ನನ್ನ (ಬಿ) ಪ್ರಶ್ನೆಗೆ ಉತ್ತರವಾಗಿ ಕೆಲವು ಕ್ರಮಗಳನ್ನು ಕೈಗೊಂಡಿರುವುದಕ್ಕಾಗಿ ನಾನು ತಮ್ಮನ್ನು ಅಭಿನಂದಿಸಬೇಕಾಗಿದೆ. ಆ ರೀತಿಯಾಗಿ ಇದುವರೆಗೆ ಎಷ್ಟು ಕೇಸುಗಳನ್ನು ತಮ್ಮ ಗಮನಕ್ಕೆ ತಂದಿದ್ದಾರೆ ? ಎಷ್ಟು ಕೇಸ್‌ಗಳ ಬಗ್ಗೆ ಕ್ರಮ ತೆಗೆದುಕೊಂಡಿದ್ದಾರೆ?

‡ ಶ್ರೀ ಡಿ. ದೇವರಾಜ್ ಅರಸ್ —ತಾವು ಕೇಳುವುದು ಅಕ್ಸಿಡೆಂಟ್ ಕೇಸುಗಳು ಎಷ್ಟು ಅಂತಲೋ ಅಥವಾ ಪೋಲೀಸಿನವರು ಹಾಕಿದಂಥ ಕೇಸುಗಳು ಎಷ್ಟು ಅಂತಲೋ ?

ಶ್ರೀ ಕೆ. ಎಂ ನಾಗಣ್ಣ.—ಎಷ್ಟು ಕೇಸುಗಳನ್ನು ಹಾಗೆ ಹಿಡಿದಿದ್ದೀರಿ ? ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಡಿ, ದೇವರಾಜ್ ಅರಸ್.—ಮಾನ್ಯ ಸದಸ್ಯರು ಕಬ್ಬನ್‌ಪೇಟೆಯಲ್ಲಿ —ಇರುವುದರಿಂದ ಅಲ್ಲಿ ಸ್ಪೀಡ್ ಟ್ರ್ಯಾಪ್ ಇರುವುದರಿಂದ ಒಂದು ತರಹ ಸ್ಪೀಡ್ ಇರಬೇಕಾಗುತ್ತದೆ. ಏಕೆಂದರೆ ಅಲ್ಲಿ ಯಾರ ನ್ನೇನೂ ಹಿಡಿಯಬೇಕಾಗಿಲ್ಲ. Automatically the speed has got to be checked there. Otherwise the car bumps. the person is likely to meet with an accident or the springs are likely to break. Automatically the person who drives has to lower the speed. That is what is called "speed Trap"

ಶ್ರೀ ಎಸ್. ಎಂ. ಶೀರವಾಳಿ ಚಂದ್ರಶೇಖರ್.—ಈಗ ಅನೇಕ ಲಾರಿ ಡ್ರೈವರುಗಳು "ರಾಮಕೃಷ್ಣ ತೀರ್ಥವನ್ನು" ತೆಗೆದುಕೊಳ್ಳುವುದರಿಂದ ಆಕ್ಸಿಡೆಂಟ್ ಆಗುತ್ತದೆಂದು ನನ್ನ ಭಾವನೆ. ಅದನ್ನು ತೆಗೆದು ಕೊಂಡು ಡ್ರೈವ್ ಮಾಡುವುದನ್ನು ತಪ್ಪಿಸಿ, ಡ್ರೈವ್ ಮಾಡುವುದಕ್ಕಾಗುವುದಿಲ್ಲವೇ ?

ಶ್ರೀ ಡಿ. ದೇವರಾಜ್ ಅರಸ್.—'' ರಾಮಂಕೃಷ್ಣ ತೀರ್ಥ'' ಅಂದರೆ ಏನು? ಅದನ್ನು ಕೊಡುವವರು ಯಾರೆಂದು ತಾವು ಹೇಳುತ್ತೀರಿ ?

(ಉತ್ತರವಿಲ್ಲ)

ಶ್ರೀ ಕೆ ಎಂ. ನಾಗಣ್ಣ.—ಕಬ್ಬನ್‌ಪಾರ್ಕ್‌ನಲ್ಲಿ ಮತ್ತು ಇತರ ಬಸ್ಸು ಮಾರ್ಗಗಳಲ್ಲಿ ಬಸ್ಸುಗಳು ಹೇಗೆ ಹೋಗುತ್ತಿರುತ್ತವೆ ಎಂಬುದನ್ನು ನೀವು ನೋಡಿದ್ದೀರಾ ? ಬಹಳ ಆಕ್ಸಿಡೆಂಟ್ಸ್ ಆಗುತ್ತಾ ಇವೆ.

ಶ್ರೀ ಡಿ. ದೇವರಾಜ್ ಅರಸ್.—ಇಲ್ಲ ಆ ರೀತಿ ಆಗುವುದಿಲ್ಲ.

ಶ್ರೀ ಕೆ. ಎಂ. ನಾಗಣ್ಣ.—ಸಾಮಾನ್ಯವಾಗಿ ದಿನಕ್ಕೆ ಎರಡು ಆಕ್ಸಿಡೆಂಟ್ಸ್ ಆಗಿರುವುದನ್ನು ಒಪ್ಪಿ ಕೊಂಡಿದ್ದೀರಿ. ಇದನ್ನು ನಿವಾರಣೆ ಮಾಡುವುದಕ್ಕೋಸ್ಕರ ಸರ್ಕಾರದವರು ಇದಕ್ಕಾಗಿ ಒಂದು ಇಲಾಖೆಯನ್ನು ತೆಗೆಯುತ್ತೀರಾ ? ಒಬ್ಬ ಏನಿಸ್ಟರ್ ಫಾರ್ ಪ್ರಿವೆನ್‌ಷನ್ ಆಫ್ ರೋಡ್ ಆಕ್ಸಿಂಡೆಂಟ್ಸ್ ಅವರನ್ನು ನೇಮಿಸಲು ಸರ್ಕಾರ ಪರಿಶೀಲನೆ ಮಾಡುತ್ತದೆಯೇ ?

ಶ್ರೀ ಡಿ. ದೇವರಾಜ್ ಅರಸ್.—ಮಾನ್ಯ ಸದಸ್ಯರ ಸಲಹೆ ಬಹಳ ಸಾಧುವಾದುದಾದರೂ, ಒಬ್ಬ ಮಂತ್ರಿ ರೋಡ್ ಡಿಪಾರ್ಟ್‌ಮೆಂಟ್ ನೋಡುವುದಕ್ಕೆ ಇದ್ದರೆ ಇನ್ನೊಬ್ಬ ಮಂತ್ರಿ ಅವರು ಮಾಡಿರುವ ಕೆಲಸವನ್ನು ನೋಡಲು ಹೋಗಬೇಕಾಗುತ್ತದೆ. ಇದರ ಬಗ್ಗೆ ನಿಜವಾವ ವಿಚಾರವನ್ನು ಹೇಳಬೇಕಾದರೆ, ಈ ದೇಶದಲ್ಲಿ ಎಷ್ಟರಮಟ್ಟಿಗೆ ಟ್ರಾಫಿಕ್ ಆಕ್ಸಿಡೆಂಟ್ಸ್ ಆಗುತ್ತಿವೆ ಎಂಬ ಬಗ್ಗೆ ಮೂರು ವರ್ಷಗಳ ಪ್ರಮಾಣ ಇದೆ. ಅದನ್ನು ಹೇಳುತ್ತೇನೆ.

ನನ್ನಲ್ಲಿ ೧೯೬೯ರಿಂದ ೧೯೭೧ರ ವರೆಗಿನ ಆಕ್ಸಿಡೆಂಟ್ಸ್‌ಗಳ ಸಂಖ್ಯೆ ಇದೆ. ಅದು ಹೀಗಿದೆ :—೧೯೬೯ರಲ್ಲಿ ನಡೆದ ಆಕ್ಸಿಡೆಂಟುಗಳ ಸಂಖ್ಯೆ ೫೧೭೮, ೧೯೭೦ರಲ್ಲಿ ೫೪೫೫ ಮತ್ತು ೧೯೭೧ರಲ್ಲಿ ೫೪೪೬ ಆಕ್ಸಿಡೆಂಟುಗಳು ನಡೆದಿರುತ್ತವೆ. ಅಂದರೆ ಇವುಗಳ ದಾಮಾಷ ನೋಡಿದರೆ ದಿನಕ್ಕೆ ಸರಾಸರಿ ೧೫ ಆಕ್ಸಿಡೆಂಟುಗಳು ನಡೆದಂತೆ ಆಗುತ್ತದೆ. ಇವುಗಳಿಗೆ ಕಾರಣವೂ ಇದೆ. ದೇಶದಲ್ಲಿ ನಾವು ಯಾವುದೋ ಒಂದು ಕಾಲದಲ್ಲಿ ಎತ್ತಿನ ಗಾಡಿ ತಿರುಗುವುದಕ್ಕಾಗಿ ಮಾಡಿಕೆ ಇಂಡಿದ್ದ ರಸ್ತೆಯನ್ನೇ, ಆ ಜಾಡನ್ನೇ ಈ ದಿನವೂ ನಾವು ಈ ದೊಡ್ಡ ದೊಡ್ಡ ಲಾರಿ ಬಸ್ ಮತ್ತು ಕಾರುಗಳನ್ನು ಬಿಡುವುದಕ್ಕೂ ಉಪಯೋಗ ಮಾಡುತ್ತಿದ್ದೇವೆ. ಅಲ್ಲದೆ ನಮ್ಮಲ್ಲಿ ಚಲಾವಣೆಯಲ್ಲಿರತಕ್ಕ ರಸ್ತೆಗಳು ಬಹಳ ಇಕ್ಕಟ್ಟಾಗಿದ್ದು ಸೊಟ್ಟ ಸೊಟ್ಟನಾಗಿ ಅಲ್ಲಲ್ಲೇ ತಿರುಗಿದ್ದು ಹಳ್ಳ ದಿಣ್ಣೆಗಳಿಂದ ಕೂಡಿರುತ್ತದೆ. ಹಿಂದೆ ಈ ರಸ್ತೆಗಳನ್ನು ಮುಂದೆ ಇಂಥ ವಾಹನಗಳ ಓಡಾಟಕ್ಕೆ ಅನುಕೂಲವಾಗಿರುವ ಹಾಗೆ ಮಾಡೋಣ ಎಂಬ ದೂರ ದೃಷ್ಟಿಯನ್ನು ಇಟ್ಟುಕೊಂಡು ಮಾಡಿದ ರಸ್ತೆಗಳಲ್ಲ ಇವು. ಸಾಲದ್ದಕ್ಕೆ ಒಂದು ವಾಹನದಲ್ಲಿ ಎಷ್ಟು ವಜೆಯನ್ನು ಇಟ್ಟುಕೊಂಡು ಮಾಡಿದ ಮಾಡಿರುತ್ತಾರೆಯೋ ಅಷ್ಟನ್ನು ಹಾಕದೆ ಮಿತಿ ಮೀರಿದ ವಜೆಯನ್ನು ಹಾಕಬೇಕೆಂದು ಕ್ಲುಪ್ತ ಓಡಿಸತಕ್ಕದ್ದು ಆಕ್ಸಿಡೆಂಟುಗಳಾಗುವುದಕ್ಕೆ ಕಾರಣ. ಎಲ್ಲಕ್ಕಿಂತಲೂ ಮಿಗಿಲಾಗಿ ನಮ್ಮಲ್ಲಿ ಡ್ರೈವರುಗಳನ್ನು ತರಬೇತಿ ಮಾಡತಕ್ಕ ಒಂದು ಸುಸಜ್ಜಿತವಾದ ಶಾಲೆಯಿಲ್ಲ. ಏನೋ ಅಷ್ಟಿಷ್ಟು ಒಂದು ಲಾರೀ ಸರ್ವೀಸನಲ್ಲಿ ಸೇರಿಕೊಂಡು ಆ ಲಾರಿಯನ್ನು ತೊಳೆಯುವುದಕ್ಕೆ, ಕಲಿತರೆ ಅರ್ಧ ಡ್ರೈವಿಂಗ್ ಕಲಿತಂತೆ ಆಯಿತೆಂಬ ಜನರೆಲ್ಲಾ ಇವತ್ತು ಡ್ರೈವರುಗಳಾಗಿದ್ದಾರೆ. ಇದರಿಂದ ಈ ಆಕ್ಸಿಡೆಂಟುಗಳು ಜಾಸ್ತಿಯಾಗಿರುತ್ತವೆಂದು ತಜ್ಞರು ಹೇಳುತ್ತಿದ್ದಾರೆ. ಅದಕ್ಕಾಗೇ ಸರ್ಕಾರದವರು ಒಂದು ಸ್ಕೈವಿಂಗ್ ಕಲಿಸತಕ್ಕ ಸ್ಕೂಲನ್ನು ತೆರೆಯ ಬೇಕೆಂಬ ಆಲೋಚನೆ ಮಾಡುತ್ತಿದ್ದಾರೆ ಇದರಿಂದಲಾದರೂ ಇವು ಸ್ವಲ್ಪ ಕಡೆಮೆಯಾಗಬಹುದೆಂಬುದು ನನ್ನ ಅಭಿಪ್ರಾಯ. ಇನ್ನು ಒಂದು ಕಾರಣ ಏನೆಂದರೆ ಕೆಲವು ಕಾರು ಬಸ್ ಲಾರಿ ಇತ್ಯಾದಿ ವಾಹನಗಳು ಓಡುವುದಕ್ಕೆ ಕಾಲ ಮುಗಿದಿದ್ದರೂ, ಅಂದರೆ ಅವುಗಳ ಆಯಸ್ಸು ಪೂರೈಸಿದ್ದರೂ ಅವುಗಳನ್ನೇ ಇನ್ನೂ ಓಡಿಸುತ್ತಿರುವುದರಿಂದಲೂ ಆಕ್ಸಿಡೆಂಟುಗಳಾಗುವುದಕ್ಕೆ ಕಾರಣವಿದೆ. ಇನ್ನು ಇಷ್ಟೆಲ್ಲಾ ಹೇಳಿದ್ದರೆ ಜೊತೆಗೆ ನಮ್ಮಲ್ಲಿ ಇರತಕ್ಕ ಒಂದೇ ರಸ್ತೆಯಲ್ಲಿ ನಾಯಿ, ಕತ್ತೆ, ಹುದುರೆ, ಎತ್ತು ಗಾಡಿ, ಬಸ್ ಲಾರಿ ಹೀಗೆ ಎಲ್ಲವೂ ಹೋಗಬೇಕಾಗಿರುತ್ತದೆ. ಹೀಗೆ ಎಲ್ಲಾ ಚರಾಚರ ವಸ್ತುಗಳು ಇಲ್ಲಿ ಸಾಗಾಟ ನಡಸಿಸಬೇಕು ಎನ್ನುತಕ್ಕ ಕಾಲದಲ್ಲಿ ರಸ್ತೆಯ ಎರಡೂ ಅಕ್ಕಪಕ್ಕಗಳಲ್ಲಿ ಇರತಕ್ಕ ಅಂಗಡಿಗಳವರು ಆ ಪಾದಚಾರಿಗಳಿಗಾಗಿ ಬಿಟ್ಟಿರತಕ್ಕ ರಸ್ತೆಯನ್ನು ಸ್ವಲ್ಪ ಸ್ವಲ್ಪವಾಗಿ ಆಕ್ರಮಿಸಿಕೊಂಡು ಆಕ್ರಮಿಸುತ್ತಾ ಬರುತ್ತಿದ್ದಾರೆ. ಅಂದಾಗ ಆ ಜನರೆಲ್ಲಾ ರಸ್ತೆ ಮಧ್ಯದಲ್ಲೇ ಓಡಾಡಬೇಕಾಗುತ್ತದೆ. ಹೀಗಿರುವಾಗ ನಮ್ಮ ಜನರಲ್ಲಿ ಕಾಲಕ್ಕೆ ತಕ್ಕಹಾಗೆ ಏನು ಒಂದು ಜಾಗರೂಕತೆ ಜನರಲ್ಲಿ ಅಂಕುರಿಸಬೇಕಾಗಿತ್ತೋ ಅದು ಇನ್ನೂ ಅಂಕುರಿಸಿಲ್ಲ. ಅಂಥ ಜಾಗರೂಕತೆ ಜನರಲ್ಲಿ ಉದಯಿಸುವುದಕ್ಕೆ ಪ್ರಯತ್ನ ಮಾಡಬೇಕಾಗಿದೆ.